ಎಂದು. ಆದರೆ ನಮ್ಮ ಮನೆಯಲ್ಲಿ ಅಮ್ಮನ ಮಾತುಗಳೇ ಸುವರ್ಣ ಶಾಸನದಂತೆ. ನಮ್ಮ ಮಾತುಗಳಿಗೆ ಬೆಲೆ ಅಂತ ಏನೂ ಇರುತ್ತಿರಲಿಲ್ಲ. ಆದರೆ ಈಗ ಅನ್ನಿಸುತ್ತದೆ ನಾಗರಿಕತೆ ಅಂದರೆ ಶಾಸನಗಳನ್ನು ವಿಧಿಸುತ್ತಾ ಹೋಗುವುದು ಅಂತ ಅಲ್ಲ.

ಪಕ್ಕ ತಿರುಗಿ ನೋಡಿದೆ. ಕಿಟಕಿ ಹತ್ತಿರ ಕುಳಿತು ಪುಟ್ಟಿ ನಿದ್ರೆ ಮಾಡಿಬಿಟ್ಟಿದ್ದಳು. ಪಾಪ ಅನ್ನಿಸಿತು. ಡ್ಯಾನ್ಸ್ ಮಾಡಬೇಕು ಅಂತ ಎಷ್ಟು ಉತ್ಸಾಹದಿಂದ ಬಂದಿದ್ದಳೋ... ಪಾಪ ಇವಳಿಗೆ ನೋವಾಯಿತಲ್ಲ ಅಂತ ಪಿಚ್ಚೆನಿಸಿತು. ನಾನೂ ಏನೂ ಮಾಡುವ ಹಾಗೆ ಇರಲಿಲ್ಲವಲ್ಲ. ಅವಳನ್ನು ಮೆಲ್ಲಗೆ ತಟ್ಟಿ ಮತ್ತೆ ನೆನಪಿಗೆ ಜಾರಿದೆ. ಶೇಷಜ್ಜಿ ಬಂದಿದ್ದು ಅಮ್ಮನಿಗೆ ಮಾತ್ರ ಕೊಂಚವೂ ಇಷ್ಟ ಇರಲಿಲ್ಲ. ಅವರು ತಮ್ಮ ಜೊತೆ ಆಸ್ತಿ ಏನನ್ನೂ ತಂದಿರಲಿಲ್ಲ. ಹಾಗೆಯೇ ಹಳೆಯ ಕಾಲದವರಂತೆ ಕೂದಲನ್ನು ಕೂಡ ತೆಗೆಸಿರಲಿಲ್ಲ. 'ಈ ಸಕೇಶೀನ ಯಾಕೆ ಕರಕೊಂಡು ಬಂದ್ರಿ. ಮನೆಗೆ ಒಳ್ಳೆಯದಾಗಲ್ಲ' ಅಂತ ಅಪ್ಪನ ಜೊತೆ ಅಮ್ಮ ಅನೇಕ ಸಲ ಜಗಳ ತೆಗೆದಿದ್ದರು. ಮನೇಲಿ ಯಾರಿಗೇ ಸೀನು ಬಂದರು ಕೂಡ ಅದಕ್ಕೆ ಶೇಷಜ್ಜಿನೇ ಕಾರಣ ಎಂಬಂತೆ ಅವರ ಮಾತು. ಅದಕ್ಕೆ ಸರಿಯಾಗಿ ಅಮ್ಮನಿಗೇ ಟೈಫಾಯ್ಡ್ ಜ್ವರ ಬಂದು ಒಂದು ತಿಂಗಳು ಮಲಗಿ ಬಿಟ್ಟರು. ಆರೈಕೆ ಮಾಡಿದ್ದು ಮಾತ್ರ ಶೇಷಜ್ಜಿನೇ! ಅದೂ ಮೂರು ತಿಂಗಳು! ನಂತರ ಅದು ಆರು ತಿಂಗಳಿಗೆ ವಿಸ್ತಾರವಾಗಿ ಕೊನೆಗೆ ಶೇಷಜ್ಜಿ ಕೈ ಅಡುಗೆ ಎಲ್ಲರಿಗೂ ಪರ್ಮನೆಂಟ್ ಆಗಿಬಿಟ್ಟಿತು. ಅಮ್ಮ ಮಾತ್ರ ಅಲ್ಲಿ ಇಲ್ಲಿ ಓಡಾಡುತ್ತ, ಅಧಿಕಾರ ಚಲಾಯಿಸುತ್ತ, ಕೈಯಲ್ಲಿ ಒಂದು ಲಟ್ಟಣಿಗೆ ಅಥವಾ ಯಾವುದೋ ಒಂದು ಪಾತ್ರೆ, ಸೌಟು... ಏನೋ ಒಂದು ಹಿಡಿದುಕೊಂಡು, ತಾನೇ ಅಡುಗೆ ಎಲ್ಲ ಮಾಡುತ್ತಿರುವುದು ಎಂಬಂತೆ ತೋರಿಸಿಕೊಳ್ಳುತ್ತ ಓಡಾಡತೊಡಗಿದರು. ನಂತರ ಅದಕ್ಕೂ ಕುಂಟು ನೆಪಗಳು ಪ್ರಾರಂಭ ಆಗಿಬಿಟ್ಟಿತು. ಒಮ್ಮೆ ತಲೆನೋವು, ಮೈನೋವು ಅಥವಾ ಎದೆ ಉರಿ... ಹೀಗೆ ಆರೋಗ್ಯದಲ್ಲಿ ನೆಪಗಳು ಕೆಲಸಕ್ಕೆ ಮಾತ್ರ ಕಾಣುತ್ತಿದ್ದವೇ ಹೊರತು ಊಟ, ಉಪಚಾರಗಳು, ಸರ್ವಾಧಿಕಾರಗಳು ಮಾತ್ರ ಸ್ವಲ್ಪ ಕೂಡ ಬದಲಾವಣೆ ಆಗಲಿಲ್ಲ.

ನನಗೆ ಎಲ್ಲವೂ ಅರ್ಥ ಆಗುತ್ತಿತ್ತಾದರೂ ಕೂಡ 'ನನ್ನ ಅಮ್ಮ ಇಷ್ಟು ಕೆಲಸಗಳ್ಳಿಯೇ? ಇಷ್ಟು ನಿಷ್ಠುರಳೇ? ಇಷ್ಟು ಸ್ವಾರ್ಥಿಯೇ?' ಅದನ್ನು ಅರಗಿಸಿಕೊಳ್ಳಲು ಆಗುತ್ತಿರಲಿಲ್ಲ. ಅದರಿಂದಲೋ ಏನೋ ಅಮ್ಮ ಮಾತನಾಡುವಾಗೆಲ್ಲ ಒಂದು ರೀತಿಯ ಗೊಂದಲಕ್ಕೆ ಬಿದ್ದು ಮೌನವಾಗಿಬಿಡುತ್ತಿದ್ದೆ. ಆದರೆ ಅಣ್ಣ ವಿಜ್ಞಾನಿ. ಬೆಂಗಳೂರಿನಲ್ಲಿ ದೊಡ್ಡ ಸಂಸ್ಥೆಯಲ್ಲಿದ್ದ. ಅವನ ಚಿಂತನೆಗಳೆಲ್ಲವೂ ಉನ್ನತವಾಗಿಯೇ ಇರುತ್ತಿದ್ದವು. ಆದರೂ ಅವನು ಕೂಡ ಅಮ್ಮನ ವಿಚಾರದಲ್ಲಿ ಎರಡನೆಯ ಮಾತನ್ನು ಆಡುತ್ತಿರಲಿಲ್ಲ. ಶೇಷಜ್ಜಿಗೆ ಮಾತ್ರ ಒಮ್ಮೊಮ್ಮೆ ಹೇಳುತ್ತಿದ್ದ– 'ನೀವು ಹಿರಿಯರು ಅರ್ಥ ಮಾಡಿಕೊಂಡು ಬಿಡಿ ಅಷ್ಟೆ'. ಶೇಷಜ್ಜಿ ಹೇಳುತ್ತಿದ್ದರು: 'ಅರ್ಥ ಮಾಡಿಕೊಂಡರೂ, ಬಿಟ್ಟರೂ ಯಾವುದೂ ಬದಲಾಗಲ್ಲ ಕಣಪ್ಪ.' ಅತ್ತಿಗೆಯ ವಿಚಾರಧಾರೆಗಳು ನನ್ನೊಳಗಿನ ಅಜ್ಞಾನವನ್ನು ಸ್ವಲ್ಪಮಟ್ಟಿಗೆ ಹೋಗಲಾಡಿಸುವಲ್ಲಿ ಸಹಾಯವಾಯಿತು ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಏಕೆಂದರೆ ಅವಳ ನೆರವಿಲ್ಲದೇ ಇದ್ದರೆ ನಾನು ಇವರನ್ನು ಮದುವೆಯಾಗಿ ದೆಹಲಿಯಂತಹ ದೊಡ್ಡ ಊರಿನಲ್ಲಿ ಜೀವನ ನಡೆಸುವುದು ಸುಲಭವಾಗಿತ್ತೇ? ಈ ಪ್ರಶ್ನೆ ನನಗೆ ಅನೇಕ ಸಲ ಕಾಡಿದೆ. ಇವರ ಬುದ್ಧಿಮತ್ತೆ, ವಿಚಾರಧಾರೆಗಳು, ಅಣ್ಣನ ವಿಚಾರಧಾರೆಗಳು ಮತ್ತು ಅತ್ತಿಗೆಯವು ಎಲ್ಲವೂ ಸತ್ಯಕ್ಕೆ ಹೆಚ್ಚು ಹತ್ತಿರ ಎಂದು ಅನೇಕ ಸಲ ನನಗೆ ತಿಳಿದು ಬಂದಿದೆ. ಒಂದುವೇಳೆ ನಾನು ಅಮ್ಮನೇ ಸರಿ ಅಂತ ಅವಳು ಹಾಡಿದ್ದೇ ವೇದ ಅಂತ ಕುಳಿತಿದ್ದರೆ ಖಂಡಿತವಾಗಿಯೂ ನನ್ನ ಜೀವನದಲ್ಲಿ ತುಂಬ